## <u>ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು-03</u>

ಸಂಖ್ಯೆ : ವಿ1/ವಿ.ಸ.ಪ/ಪ.ಕಾ/17/2014ದಿನಾಂಕ : 04.09.2014

### <u>ಜ್ಞಾಪ ನ</u>

ವಿಷಯ : ಅಕ್ಟೋಬರ್ 2014ನೇ ಸಾಲಿನ ಸಂಗೀತ ಪರೀಕ್ಷೆಯ ಪ್ರವೇಶ ಪತ್ರವನ್ನು ಮತ್ತು
ನಾಮಿನಲ್ ರೋಲ್‌ನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸುವ ಬಗ್ಗೆ.

ಅಕ್ಟೋಬರ್ 2014ನೇ ಸಾಲಿನ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪ್ರಾಯೋಗಿಕ ಪರೀಕ್ಷೆಗಳು ದಿನಾಂಕ:07-10-2014ರಿಂದ ಪ್ರಾರಂಭಗೊಳ್ಳಲಿದ್ದು, **ಲಿಖಿತ( ಥಿಯರಿ) ಪರೀಕ್ಷೆಯು ದಿನಾಂಕ 02-11-2014ರಂದು ನಡೆಯಲಿದೆ**.. ನಿಮ್ಮ ಪರೀಕ್ಷಾ ಕೇಂದ್ರದ ಪ್ರವೇಶ ಪತ್ರಗಳನ್ನು ಮತ್ತು ಕೇಂದ್ರ ನಾಮಿನಲ್ ರೋಲ್‌ಗಳನ್ನು ಈ ಪತ್ರದೊಂದಿಗೆ ಕಳುಹಿಸಲಾಗುತ್ತಿದೆ.

**<u>ಪ್ರವೇಶ ಪತ್ರಗಳನ್ನು ಶಾಲಾ/ಸಂಸ್ಥೆಗಳಿಗೆ ನೀಡುವ ಮೊದಲು ಈ ಕೆಳಗಿನ ಅಂಶಗಳನ್ನು ಪರಿಶೀಲಿಸುವುದು.</u>**

1. ನಿಮ್ಮ ಕೇಂದ್ರಕ್ಕೆ ಕಳುಹಿಸಿದ ಸಿ.ಎನ್.ಆರ್ (ಕೇಂದ್ರ ನಾಮ ಪಟ್ಟಿ) ಮತ್ತು ಪ್ರವೇಶ ಪತ್ರಗಳು ಸರಿಯಾಗಿವೆಯೇ ಎಂದು ಪರಿಶೀಲಿಸುವುದು

2. ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ವಿಷಯ, ವಿಷಯಸಂಕೇತ, ಶಾಲಾ ಸಂಕೇತ ಹಾಗೂ ಕೇಂದ್ರ ಸಂಕೇತ ಸರಿಯಾಗಿದೆಯೇ ಎಂದು ಪರಿಶೀಲಿಸುವಂತೆ ಸಂಸ್ಥೆಯ ಮುಖ್ಯಸ್ಥರಿಗೆ/ಅಭ್ಯರ್ಥಿಗಳಿಗೆ ತಿಳಿಸುವುದು.

3. ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಬಾರದಿದ್ದಲ್ಲಿ ಅಥವಾ ಭಾವಚಿತ್ರ ಅದಲು ಬದಲು ಆಗಿದ್ದಲ್ಲಿ **<u>ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅಭ್ಯರ್ಥಿಯನ್ನು ಪರಿಶೀಲಿಸಿ, ಹೊಸಭಾವಚಿತ್ರ ಅಂಟಿಸಿ ಸಹಿ ಹಾಗೂ ಮೊಹರಿನೊಂದಿಗೆ ಪರೀಕ್ಷೆಗೆ ಹಾಜರುಪಡಿಸುವುದು.</u>**

4. ಪ್ರವೇಶ ಪತ್ರದಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಪ್ರವೇಶಪತ್ರದ ಜೆರಾಕ್ಸ್ ಪ್ರತಿಯಲ್ಲಿ ಕೆಂಪುಶಾಹಿಯಲ್ಲಿ ಆಂಗ್ಲ ಭಾಷೆಯಲ್ಲಿ 'CAPITAL LETTERS'ನಲ್ಲಿ ಬರೆದು, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಜನ್ಮ ದಿನಾಂಕ ಪ್ರಮಾಣ ಪತ್ರ ಅಥವಾ ಶಾಲಾ A.R.Eಇವುಗಳಲ್ಲಿ ಯಾವುದಾದರೊಂದು ದಾಖಲೆಯನ್ನು ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಿ ಮನವಿಯೊಂದಿಗೆ **ದಿನಾಂಕ : 25-10-2014ರೊಳಗೆ ಶಾಲಾ ಮುಖ್ಯಸ್ಥರು ನೇರವಾಗಿ ಮಂಡಳಿಗೆ ಸಲ್ಲಿಸುವಂತೆ ತಿಳಿಸುವುದು. ನಂತರ ಬಂದ ತಿದ್ದುಪಡಿಗಳಿಗೆ ರೂ.100=00 ದಂಡ ವಿಧಿಸಲಾಗುವುದು. ಮೂಲ ಪ್ರವೇಶಪತ್ರಗಳನ್ನು ಯಾವುದೇ ಕಾರಣದಿಂದಲೂ ಹಿಂದಿರುಗಿಸಬಾರದು.**

5. ನಿಮ್ಮ ಪರೀಕ್ಷಾ ಕೇಂದ್ರವನ್ನು ಹೊರತುಪಡಿಸಿ ಬೇರೆ ಪರೀಕ್ಷಾ ಕೇಂದ್ರದ ಪ್ರವೇಶ ಪತ್ರಗಳು ಬಂದಿದ್ದಲ್ಲಿ ತಕ್ಷಣವೇ ಮಂಡಳಿಗೆ ರವಾನಿಸುವುದು.

6. ಮಂಡಳಿಯ ಅನುಮತಿ ಇಲ್ಲದೆ ಅಭ್ಯರ್ಥಿಯ ಹೆಸರು, ತಂದೆ ಹೆಸರು, ವಿಷಯಸಂಕೇತ, ಶಾಲಾಸಂಕೇತ, ಕೇಂದ್ರಸಂಕೇತ ಇತ್ಯಾದಿಗಳನ್ನು ತಿದ್ದುಪಡಿ ಮಾಡಿಕೊಂಡಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದವರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

7. ಒಂದೇ ವಿದ್ಯಾರ್ಥಿಗೆಎರಡು ಪ್ರವೇಶ ಪತ್ರಗಳು ಬಂದಲ್ಲಿ, ಒಂದನ್ನು ಪರೀಕ್ಷಾ ಮಂಡಳಿಗೆ ಹಿಂತಿರುಗಿಸುವುದು.

**8.** **ಇನ್ನಿತರ ಯಾವುದೇ ಸಮಸ್ಯೆ ಇದ್ದಲ್ಲಿ “ಶ್ರೀಮತಿ ಹೇಮಲತಾ .ಡಿ.ನಾಯಕ, ಸಹಾಯಕ ನಿರ್ದೇಶಕರು, ಸಂಗೀತ ಶಾಖೆ, 4ನೇ ಮಹಡಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03” ಈ ವಿಳಾಸಕ್ಕೆ ಸಂಪರ್ಕಿಸುವುದು ಅಥವಾಪ್ರವೇಶಪತ್ರದ ಜೆರಾಕ್ಸ್ ಪ್ರತಿಯೊಂದಿಗೆ ವಿವರ ಬರೆದು ಫ್ಯಾಕ್ಸ್ ನಂಬರ್ 08023311146 ಗೆ ಫ್ಯಾಕ್ಸ್ ಮಾಡುವುದು.**

**9.** **ಈ ಜ್ಞಾಪನದ ಪ್ರತಿಯನ್ನು ತಪ್ಪದೇ ತಮ್ಮ ಶಾಲೆಯ ಸೂಚನಾ ಫಲಕದಲ್ಲಿ ಅಂಟಿಸುವುದು.**

**ವಿಶೇಷ ಸೂಚನೆ: ಬೆಂಗಳೂರು ಮತು ಮೈಸೂರು ನಗರದ ಹಲವು ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರ ಬದಲಾವಣೆ ಮಾಡಲಾಗಿದ್ದು, ಪ್ರವೇಶ ಪತ್ರದಲ್ಲಿ ಸೂಚಿಸಿರುವ ಪರೀಕ್ಷಾ ಕೇಂದ್ರಕ್ಕೆ(ಥಿಯರಿ ಹಾಗೂ ಪ್ರಾಯೋಗಿಕ ಪರೀಕ್ಷೆ) ಹಾಜರಾಗಲು ತಿಳಿಸುವುದು.**

ಸಹಿ/–

ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಗೆ,**

1) ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮಕ್ಕಾಗಿ.
2) ಕಛೇರಿ ಪ್ರತಿ.